# ಬ್ಯಾಂಕ್ ಸಹಕಾರದಿಂದ ಉದ್ದಿಮೆದಾರಾಗಲು ಸಲಹೆ

**ಸಂ.ಕ ಸಮಾಚಾರ ಹುಬ್ಬಳ್ಳಿ**

ಈ ಹಿಂದೆ ಉದ್ಯಮ ಆರಂಭಕ್ಕೆ ಯಾರೂ ಕೈಹಿಡಿಯುತ್ತಿರಲಿಲ್ಲ. ಈಗ ಸರ್ಕಾರ, ಬ್ಯಾಂಕ್‌ಗಳು ಮುಂದೆ ಬರುತ್ತಿವೆ. ಇವೆಲ್ಲದರ ಸಹಕಾರ, ಮಾರ್ಗದರ್ಶನದಿಂದ ಎಲ್ಲರೂ ದೊಡ್ಡ ಉದ್ದಿಮೆದಾರರಾಗಬೇಕು ಎಂದು ದೇಶಪಾಂಡೆ ಫೌಂಡೇಶನ್ ಸಂಸ್ಥಾಪಕ ಡಾ. ಗುರುರಾಜ ದೇಶಪಾಂಡೆ ಸಲಹೆ ನೀಡಿದರು.

ಸೋಮವಾರ ವಿದ್ಯಾನಗರದಲ್ಲಿನ ದೇಶಪಾಂಡೆ ಫೌಂಡೇಶನ್‌ನ ಆಯೋಜಿಸಿದ್ದ ನವೋದ್ಯಮ ಸಮ್ಮೇಳನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರತಿಯೊಂದು ಉದ್ಯಮದ ಆರಂಭದಲ್ಲಿ ಸಮಸ್ಯೆ ಇದ್ದೇ ಇರುತ್ತದೆ. ಸಮಸ್ಯೆ ಇಲ್ಲದಿದ್ದರೆ ಅದು ವ್ಯಾಪಾರವೂ ಅಲ್ಲ. ಉದ್ದಿಮೆದಾರ ಕೊನೆ ತನಕ ಲಾಭದ ನಿರೀಕ್ಷೆಯಲ್ಲಿರಬೇಕು. ಅಂತಿಮವಾಗಿ ಸಿಗುವ ಸಂತಸ ದೊಡ್ಡದು. ಅದು ಅನುಭವಿಸುವ ಉದ್ಯಮಿಗೆ ಮಾತ್ರ ಗೊತ್ತು ಎಂದು ಹೇಳಿದರು.

ತಾವು ಉದ್ಯಮಿಗಳಾಗುವುದು ಅಷ್ಟೇ ಅಲ್ಲ ತಮ್ಮ ಮಕ್ಕಳನ್ನೂ ದೊಡ್ಡ ಉದ್ಯಮಿದಾರರನ್ನಾಗಿ ಮಾಡಬೇಕು ಎಂದು ಸಲಹೆ ನೀಡಿದರು.



ಸೋಮವಾರ ಹುಬ್ಬಳ್ಳಿ ವಿದ್ಯಾನಗರದಲ್ಲಿನ ದೇಶಪಾಂಡೆ ಫೌಂಡೇಶನ್ ಆಯೋಜಿಸಿದ್ದ ನವೋದ್ಯಮ ಸಮ್ಮೇಳನಕ್ಕೆ ಗಣ್ಯರು ಸಸಿಗೆ ನೀರುಣಿಸುವ ಮೂಲಕ ಚಾಲನೆ ನೀಡಿದರು.

ವಿಜಯಾ ಬ್ಯಾಂಕ್ ಪ್ರಾದೇಶಿಕ ಮುಖ್ಯಸ್ಥ ಬ್ಯಾಪ್ಟಿಸ್ಟ್ ಲೋಬೊ ಮಾತನಾಡಿ, ಡಿಜಿಟಲೀಕರಣಕ್ಕೆ ಪ್ರಾಶಸ್ತ್ಯ ನೀಡುವುದರಿಂದ ಮುಂದೊಂದು ದಿನ ಭಾರತ ಆರ್ಥಿಕವಾಗಿ ಸೂಪರ್ ಪವರ್ ಆಗಲಿದೆ. ಗ್ರಾಮೀಣಾಭಿವೃದ್ಧಿ ಮತ್ತು ಮಹಿಳೆಯರ ಆರ್ಥಿಕ ಸಬಲೀಕರಣ ಹೊಂದಿ ಅಭಿವೃದ್ಧಿಗೆ ಕಾರಣವಾಗಲಿದೆ. ದೇಶದಲ್ಲಿ ಆರ್ಥಿಕ ಸಾಕ್ಷರತೆ ಪ್ರಮಾಣ ಕಡಿಮೆ ಇದೆ. ಭಾರತದಲ್ಲಿ ಶೇ.35 ಇದ್ದರೆ, ಚೀನಾದಲ್ಲಿ ಶೇ.63 ಇದೆ. ಶೇ.76 ರಷ್ಟು ಭಾರತದ ಜನರಿಗೆ ಬ್ಯಾಂಕ್‌ನಲ್ಲಿ ವ್ಯವಹರಿಸುವ ಜ್ಞಾನವೇ ಇಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಆಂಧ್ರ ಬ್ಯಾಂಕ್ ಪ್ರಾದೇಶಿಕ ಮುಖ್ಯಸ್ಥ ಜೆ. ಎಸ್. ಜಯಪ್ರಕಾಶ, ದೇಶಪಾಂಡೆ ಫೌಂಡೇಶನ್ ಸಿಇಒ ವಿವೇಕ ಪವಾರ ಮಾತನಾಡಿದರು.

ಗದಗ, ಹಾವೇರಿ, ಹುಬ್ಬಳ್ಳಿ-ಧಾರವಾಡ ಹಾಗೂ ಗದಗ ಸೇರಿ ವಿವಿಧ ಜಿಲ್ಲೆಗಳ ಸಣ್ಣ ಉದ್ದಿಮೆದಾರರು ಭಾಗವಹಿಸಿದ್ದರು. ಅಲ್ಲದೆ ಅವರು ತಂದಿದ್ದ ಜವಳಿ, ಕರಕುಶಲ, ಆಹಾರ ಉತ್ಪಾದನೆ ಪ್ರದರ್ಶಿಸುವುದರ ಜೊತೆಗೆ ಮಾರಾಟ ಮಾಡಿದರು. ಯುಎನ್‌ಡಿಪಿಯ ಜಯಚಂದ್ರನ್, ಫಿಲಿಪ್ ಮ್ಯಾಥಿವ್, ಈರಣ್ಣ ರೊಟ್ಟಿ ಸೇರಿದಂತೆ ಮೊದಲಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.